**ಪಿ. ಡಬ್ಲ್ಯೂ.1**

**(ಇಂದು ದಿಃ 07.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.)**

**ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ.ಎಸ್.ಬಿ.ಬಿ ವಕೀಲರಿಂದ,**

ವಾದಿ 1 ರಿಂದ 5 ಜಟ್ಟಯ್ಯ ದೇವಾಡಿಗರವರ ವಾರಸುದಾರರಾಗಿರುತ್ತಾರೆ. ನಮ್ಮ ಕುಟುಂಬದ ಮೂಲ ಪುರುಷರು ಎಂದರೆ ದೇವಯ್ಯ ದೇವಾಡಿಗ ಪೂಜಾರಿಮನೆ. ದೇವಯ್ಯನವರಿಗೆ ಮೂವರು ಮಕ್ಕಳು. ಅವರು ಯಾರೆಂದರೆ ಶುಕ್ರಯ್ಯ, ಸೋಮಯ್ಯ ಮತ್ತು ಮಂಜಯ್ಯನವರಾಗಿರುತ್ತಾರೆ.

ಶುಕ್ರಯ್ಯನವರಿಗೆ ನನ್ನ ತಂದೆ ಮತ್ತು ಅವರ ಸಹೋದರನಾದ ಗೋಯ್ದ್ದಾ ಶುಕ್ರಯ್ಯ ದೇವಾಡಿಗ ಎನ್ನುವವರು ಮಕ್ಕಳಿರುತ್ತಾರೆ. ನನ್ನ ದೊಡ್ಡಪ್ಪನಾದ ಗೋಯ್ದಾರವರಿಗೆ ಇಬ್ಬರು ಮಕ್ಕಳು. ಯಾರೆಂದರೆ ನಾಗಪ್ಪ ಮತ್ತು ಮಂಜುನಾಥರಾಗಿರುತ್ತಾರೆ.

ಸೋಮಯ್ಯ ಎನ್ನುವವರಿಗೆ ನಾಗಪ್ಪ ಎನ್ನುವ ಒಬ್ಬ ಮಗನಿದ್ದು ಆತ ಮೃತನಾಗಿದ್ದು ಆತನಿಗೆ ಗೋಪಾಲ ಎನ್ನುವ ಮಗನಿರುತ್ತಾನೆ.

ಮಂಜಯ್ಯನವರಿಗೆ ನಾರಾಯಣ ಎನ್ನುವ ಒಬ್ಬ ಮಗನಿದ್ದು ಆತ ಮೃತನಾಗಿದ್ದು ಆತನಿಗೆ ಈಶ್ವರ ನಾರಾಯಣ ದೇವಾಡಿಗ ಎನ್ನುವ ಮಗನಿರುತ್ತಾನೆ.

ದಾವಾ ಆಸ್ತಿ ನಮ್ಮ ಕುಟುಂಬಕ್ಕೆ ಮಂಜೂರಾಗಿರುತ್ತದೆ. ಸರ್ವೆ ನಂಬರ 427/1 ರಲ್ಲಿ ಉಳಿದ 4 ಗುಂಟೆ ಕ್ಷೇತ್ರವು ನಾರಾಯಣ ಮಂಜಪ್ಪ ದೇವಾಡಿಗ ಮತ್ತು ಮಂಜಪ್ಪ ಮಾಸ್ತಿ ದೇವಾಡಿಗ ಎನ್ನುವವರಿಗೆ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಪ್ರತಿವಾದಿ 1 ರಿಂದ 6 ರವರು ನಾರಾಯಣ ಮಂಜಪ್ಪ ದೇವಾಡಿಗ ಮತ್ತು ಮಂಜಪ್ಪ ಮಾಸ್ತಿ ದೇವಾಡಿಗರವರ ವಾರಸುದಾರರು ಎಂದರೆ ನನಗೆ ಗೊತ್ತಿಲ್ಲ.

ನಿಮ್ಮ ಪ್ರಕಾರ ಸರ್ವೆ ನಂಬರ 427/1 ರಲ್ಲಿ ಉಳಿದ 4 ಗುಂಟೆ ಕ್ಷೇತ್ರ ಯಾರ ಹೆಸರಿಗೆ ಮಂಜೂರಾಗಿದೆ ಎಂದರೆ ಸಾಕ್ಷಿಯು ನನಗೆ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ಸರ್ವೆ ನಂಬರ 427/1 ಎಂದು ತೋರಿಸಲಾದ ದಾವಾ ಆಸ್ತಿಯು ನಮಗೆ ಮಂಜೂರಾಗುವ ಕಾಲಕ್ಕೆ ಸರ್ವೇ ನಂಬರ 427/1ಬ ಅಂತಾ ಆಗಿತ್ತು. ಸರ್ವೇ ನಂಬರ 427/1ಬ ರಲ್ಲಿ ನಿಮಗೆ ಮಂಜೂರಿಯಾಗುವಾಗ 4 ಗುಂಟೆ 4 ಅಣೆ ಆಸ್ತಿ ಅದರಲ್ಲಿ 4 ಅಣೆ ಆಸ್ತಿ ಖರಾಬು ಜಾಗ ಅಂತಾ ಮಂಜೂರಾಗಿರುತ್ತದೆ ಎಂದರೆ ಸರಿ.

ನಮಗೆ ಆಸ್ತಿ ಮಂಜೂರಾಗುವ ಕಾಲಕ್ಕೆ ಪಹಣಿಯು ಪ್ರತ್ಯೇಕವಾಗಿ ನಡೆದುಕೊಂಡು ಬಂದಿತ್ತು.

ನಿಮಗೆ ಸರ್ವೇ ನಂಬರ 427/1ಬ ರಲ್ಲಿ 4 ಗುಂಟೆ 4 ಅಣೆ ಆಸ್ತಿಯು ಮಂಜೂರಾಗುವ ಸಮಯದಲ್ಲಿ ಪ್ರತಿವಾದಿ 1 ರಿಂದ 6 ರವರ ಕುಟುಂಬಸ್ಥರಿಗೆ ಸರ್ವೇ ನಂಬರ 427/1ಅ ರಲ್ಲಿ 4 ಗುಂಟೆ 4 ಅಣೆ ಆಸ್ತಿ ಪ್ರತ್ಯೇಕವಾಗಿ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಸರ್ವೇ ನಂಬರ 427/1ಬ ಮತ್ತು ಸರ್ವೇ ನಂಬರ 427/1ಅ ಇದರ ಪಹಣಿಗಳು ಪ್ರಪ್ರತ್ಯೇಕವಾಗಿದ್ದವು ಎಂದರೆ ಸರಿ. ಆ ಪ್ರತ್ಯೇಕ ವೈವಾಟಿಗೆ ಸಂಬಂಧಿಸಿಯೇ ಭೂನ್ಯಾಯ ಮಂಡಳಿಯವರು ಮಂಜೂರಿ ಮಾಡಿರುತ್ತಾರೆ ಎಂದರೆ ಸರಿ.

ಸರ್ವೇ ನಂಬರ 427/1ಬ ಮತ್ತು ಸರ್ವೇ ನಂಬರ 427/1ಅ ಇದರ ನಕಾಶೆ ಒಂದೇ ಆಗಿತ್ತು ಎಂದರೆ ಸರಿ. ಸರ್ವೇ ನಂಬರ 427/1ಬ ಮತ್ತು ಸರ್ವೇ ನಂಬರ 427/1ಅ ಇದರ ಪಹಣಿಗಳು ಪ್ರಪ್ರತ್ಯೇಕವಾಗಿ ಇರುತ್ತದೆ ಅಂತಾ ಮತ್ತು ಕೆ.ಡಿ.ಟಿ. ಮತ್ತು ಸರ್ವೇ ನಕಾಶೆಗೆ ತಾಳೆ ಇಲ್ಲಾ ಅಂತಾ ಅವುಗಳನ್ನು 2011-12 ನೇ ಸಾಲಿನಲ್ಲಿ ತಹಶೀಲ್ದಾರರವರ ಆದೇಶದ ಮೇರೆಗೆ ಸರ್ವೇ ನಂಬರ 427/1 ಅಂತಾ ಆಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸರ್ವೇ ನಂಬರ 427/1 ಅಂತಾ ಪಹಣಿ ಪತ್ರಿಕೆ ಹೊರಡಿಸಿದ ನಂತರ ನೀವು ಪಹಣಿ ಪತ್ರಿಕೆಯನ್ನು ನೋಡಿರುತ್ತೀರಿ ಎಂದರೆ ಸರಿ.

ಸರ್ವೇ ನಂಬರ 427/1ಕ್ಕೆ ಸಂಬಂಧಿಸಿದಂತೆ ಇರುವ ಪಹಣಿ ಪತ್ರಿಕೆಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಅದರಲ್ಲಿ ವಾದಿಗಳಿಗೆ 4 ಗುಂಟೆ ಆಸ್ತಿ ಅಂತಾ ಮತ್ತು 4 ಗುಂಟೆ ಆಸ್ತಿಯನ್ನು ಪ್ರತಿವಾದಿಗಳಿಗೆ ಅಂತಾ ಪ್ರತ್ಯೇಕವಾಗಿ ನಮೂದಿಸಲಾಗಿರುತ್ತದೆ ಎಂದರೆ ಸರಿ. ಸರ್ವೇ ನಂಬರ 427/1 ಅಂತಾ ಪಹಣಿ ಹೊರಡಿಸಿದ ನಂತರ ನಿಮ್ಮ 4 ಗುಂಟೆ ಕ್ಷೇತ್ರವನ್ನು

ಪ್ರತ್ಯೇಕಪಡಿಸಿಕೊಳ್ಳುವ ಸಲುವಾಗಿ ನೀವು ಸರ್ವೇ ಇಲಾಖೆಗೆ ಯಾವುದೇ ಅರ್ಜಿಯನ್ನು ಸಲ್ಲಿಸಿ ನಕಾಶೆಯನ್ನು ಮಾಡಿಸಿಕೊಂಡಿದ್ದು ಇರುವುದಿಲ್ಲ ಎಂದರೆ ಸರಿ.

ಪ್ರತಿವಾದಿಗಳು ಅವರ 4 ಗುಂಟೆ ಕ್ಷೇತ್ರವನ್ನು ಪ್ರತ್ಯೇಕಪಡಿಸಲು ಮತ್ತು ಪೋಡಿ ಪ್ರಕರಣ ನಡೆಸುವ ಸಲುವಾಗಿ ಸಲ್ಲಿಸಿದ ಅರ್ಜಿಗೆ ಅನುಗುಣವಾಗಿ ಸರ್ವೆಯರ್ ಗಳು ಸ್ಥಳಕ್ಕೆ ಬಂದಾಗ ವಾದಿಗಳು ಎಲ್ಲರೂ ಸೇರಿಕೊಂಡು ತಕರಾರನ್ನು ಮಾಡಿ ಅವರನ್ನು ಹಿಂದಕ್ಕಿರುತ್ತೀರಿ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸರ್ವೇಯರ್ ರವರು ನಾವು ಮಾಡಿದ ತಕರಾರಿಗೆ ಮರಳಿ ಹೋದ ನಂತರ ನಾವು ಈ ದಾವೆಯನ್ನು ಸಲ್ಲಿಸಿರುತ್ತೇವೆ.

**<u>ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಗಳ ಪರ ಶ್ರೀ.ಎಸ್.ಬಿ.ಬಿ ವಕೀಲರು ಸಮಯ ಕೋರಿರುತ್ತಾರೆ. ಆಲಿಸಿ ನೀಡಲಾಗಿದೆ.</u>**

(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ.ಕೇ. ಸರಿ ಇದೆ**

**ಹೆಚ್ಚುವರಿ ಸಿವಿಲ್ ಜಡ್ಜ, ಭಟ್ಕಳ**